Sl. A No. 78–2021

AW–1

ದಿನಾಂಕಃ 10–07–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ– ಎದುರುದಾರರ ಪರವಾಗಿಃ ಶ್ರೀ. ಎಲ್ ಎಂ ಪಿ ವಕೀಲರಿಂದ ಃ

ಎದುರುದಾರರಾದ ಆನಂದ್ ಬಿ ಎಂ ಅವರ ವಿರುದ್ಧ ನಡೆಸಿದ ವಿಚಾರಣೆ ನನಗೆ ನೆನಪಿರುತ್ತದೆ . ಹಲವಾರು ಸಂದರ್ಭಗಳಲ್ಲಿ ಎದುರುದಾರರು ಪಾಟೀ ಸವಾಲು ಮಾಡಬೇಕಾದ ಸಂದರ್ಭದಲ್ಲಿ ಅವರು ಕೇಳಿದಂತಹ ಪ್ರಶ್ನೆಗಳನ್ನು ತಿರಸ್ಕರಿಸಿ ಅದಕ್ಕೆ ಸಮಂಜಸವಾದ ಕಾರಣಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ಕೆಲವೊಂದು ಬಾರಿ ತಿರಸ್ಕರಿದ್ದೇನೆ ಹಾಗೂ ಸಮಂಜಸವಾದ ಕಾರಣಗಳನ್ನೂ ಸಹ ನೀಡಿರುತ್ತೇನೆ. ದಿಃ14.07.2020 ರಂದು ಎದುರುದಾರರು ಎಂ ಡಬ್ಲ್ಯೂ –1 ರವರುನ್ನು ಪಾಟೀ ಸವಾಲು ಮಾಡುವ ಸಂದರ್ಭದಲ್ಲಿ ಅವರಿಗೆ ಕೇಳುವ ಪ್ರಶ್ನೆಯನ್ನು ತಿರಸ್ಕರಿಸಿ ಯಾವುದೇ ಸಮಂಜಸ ಕಾರಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ಈ ಬಗ್ಗೆ ದಿನಾಂಕ 20.09.2020 ರಂದು ಆಪೇಕ್ಷಣಾ ಪತ್ರವನ್ನು ನೀಡಿರುತ್ತಾರೆ ಎಂದರೆ ನೆನಪಿಲ್ಲ . ಅದಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಆದೇಶವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪಾಟೀ ಸವಾಲು ಪ್ರಶ್ನೆಗಳನ್ನು ತಿರಸ್ಕರಿಸಿದ ವಿಚಾರದ ಬಗ್ಗೆ ದಿನಾಂಕ 25.08.2020 ರಂದು ಎದುರುದಾರರು ಆಪೇಕ್ಷಣಾ ಪತ್ರವನ್ನು ಸಲ್ಲಿಸಿದ್ದು ಅದಕ್ಕೂ ಕೂಡ ಆದೇಶವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಎಂ ಡಬ್ಲ್ಯೂ –5 ಧರಣೇಶ್ ಎಂಬುವವರ ಪಾಟೀ ಸವಾಲು ಸಂದರ್ಭದಲ್ಲಿ ಅವರು ಘಟನೆಯ ಒಂದು ದಿನಾಂಕವನ್ನು ತಪ್ಪಾಗಿ ಹೇಳಿದ್ದು, ಅದನ್ನು ಪಾಟೀ ಸವಾಲಿನ ನಂತರ ಮಂಡನಾಧಿಕಾರಿಗಳ ಸಲ್ಲಿಕೆಯ ಮೇರೆಗೆ ಏಕಪಕ್ಷೀಯವಾಗಿ ತಿದ್ದಿರುತ್ತೇನೆ ಎಂದರೆ ಸರಿಯಲ್ಲ . ಇದಕೆ ಸಂಬಂದಿಸಿದಂತೆ ಎದುರುದಾರರು ದಿನಾಂಕ 21.09.2021 ರಂದು ಆಪೇಕ್ಷಣವನ್ನು ಸಲ್ಲಿಸಿದ್ದು ಅದಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಆದೇಶವನ್ನು ಮಾಡಿಲ್ಲ ಎಂದರೆ ಸರಿಯಲ್ಲ . ಸದರಿ ಆದೇಶವನ್ನು ವಾಸ್ತವಿಕ ಸ್ಥಿತಿಗೆ ಅನುಗುಣವಾಗಿ ಮಾಡಿರುತ್ತೇನೆ. ವಿಚಾರಣೆಯ ದಿನಾಂಕವಾದ 14.09.2020 ರಂದು ಮಂಡನಾಧಿಕಾರಿಗಳ ಸೂಚನೆಯ ಮೇರೆಗೆ ಸೆಕ್ಯೂರಿಟಿ ಅವರು ಎದುರುದಾರ ಬಳಿ ಇದ್ದ ದಾಖಲಾತಿಗಳನ್ನು ಕಿತ್ತುಕೊಳ್ಳುಲು ಪ್ರಯತ್ನಿಸಿರುತ್ತಾರೆ ಹಾಗೂ ಎದುರುದಾರರು ಸದರಿ ವಿಚಾರವನ್ನು ತಮ್ಮ ಗಮನಕ್ಕೆ 16.09.2020 ರಂದು ತಂದಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿಯು ಸದರಿ ವಿಚಾರವು ವಿಚಾರಣಾಧಿಕಾರಿಯಾದ ನನಗೆ ಅಸಂಬದ್ಧವಾಗಿರುತ್ತದೆ ಎಂದು ನುಡಿಯುತ್ತಾರೆ . ವಿಚಾರಣಾಧಿಕಾರಿಯು ವಿಚಾರಣೆಗೆ ಸಂಬಂಧಿಸಿದಂತೆ ಯಾವುದೇ ತಾರತಮ್ಯವನ್ನು ಮಾಡದೇ ಎದುರುದಾರರಿಗೆ ಪೂರ್ವ ಗ್ರಹ ಪೀಡಿತವಾಗದಂತೆ ವಿಚಾರಣೆಯನ್ನು ನಡೆಸಬೇಕು ಎಂದರೆ ಸರಿ .

ಮಂಡನಾಧಿಕಾರಿಗಳ ಸೂಚನೆಯ ಮೇರೆಗೆ ಎದುರುದಾರರ ದಾಖಲಾತಿಗಳನ್ನು ಸ್ಯಕೂರಿಟಿಯವರು ಕಿತ್ತುಕೊಳ್ಳಲು ಪ್ರಯತ್ನಿಸಿದ ವಿಚಾರ ನನಗೆ ಗೊತ್ತಾದ ಮಂಡನಾಧಿಕಾರಿಗೆ ಸೂಕ್ತ ನಿರ್ದೇಶನಗಳನ್ನು ಯಾವುದೇ ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ವಿಚಾರವು ವಿಚಾರಣಾಧಿಕಾರಿಯಾದ ನನಗೆ ಅಸಂಬದ್ಧವಾಗಿರುತ್ತದೆ ಎಂದು ನುಡಿಯುತ್ತಾರೆ . ವಿಚಾರಣೆ ಕಾಲಕ್ಕೆ ಮಂಡನಾಧಿಕಾರಿಗಳು ಎದುರುದಾರರನ್ನು ಹೀನಾಯವಾಗಿ ಮಾತಾಡಿ , ಇಲ್ಲಿಂದ ಒದ್ದು ಹೊರಗಡೆ ಹಾಕುತ್ತೇನೆ ಎಂದು ಹೇಳಿದರು ಸಹ ನೀವು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ . ಈ ವಿಚಾರಕ್ಕೆ ಸಂಬಂಧಿಸಿದಂತೆ ದಿನಾಂಕ 17.06.2021 ರಂದು ಆಪೇಕ್ಷಣೆ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 01.10.2021 ಎಂ ಡಬ್ಲ್ಯೂ -7 ರವರ ಸಾಕ್ಷಿ ಕಾಲಕ್ಕೆ ಅವರಿಗೆ ಮುಕ್ತವಾಗಿ ತಮ್ಮ ಹೇಳಿಕೆಯನ್ನು ನೀಡಲು ಅವಕಾಶವನ್ನು ಕೊಡದೆ, ಆಡಳಿತ ವರ್ಗದವರು ನೀಡಿದ ದೂರನ್ನು ಓದಿ ಹೇಳಲು ಅವಕಾಶ ನೀಡಿರುತ್ತೇನೆ ಎಂದರೆ ಸರಿಯಲ್ಲ . ಇದಕ್ಕೆ ಸಂಬದಧಿಸಿದಂತೆ ಎದುರುದಾರರ ದಿನಾಂಕ 05.10.2020 ರಂದು ತಮ್ಮ ಆಪೇಕ್ಷಣ ಪತ್ರವನ್ನು ಸಲ್ಲಿಸಿರುತಾ್ತರೆ ಎಂದರೆ ನನಗೆ ನೆನಪಿಲ್ಲ. ಎದುರುದಾರರು ಹಲವಾರು ಸಂದರ್ಭಗಳಲ್ಲಿ ಆಪೇಕ್ಷಣ ಪತ್ರಗಳನ್ನು ಸಲ್ಲಿಸಲು ಬಂದಾಗ ಅದನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ . ಇದಕ್ಕೆ ಸಂಬಂಧಿಸಿದಂತೆ ದಿನಾಂಕ 09.11.2020 ರಂದು ಆಪೇಕ್ಷಣ ಪತ್ರವನ್ನು ಸಲ್ಲಸಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಈ ಬಗ್ಗೆ ನಾನು ದಾಖಲಾತಿಗಳನ್ನು ನೋಡಿ ಹೇಳುವ ಅವಶ್ಯಕತೆ ಇರುವುದಿಲ್ಲ.

ನೀವು ಆಡಳಿತ ವರ್ಗದ ಪರವಾಗಿ ವಿಚಾರಣೆಯನ್ನು ನಡೆಸುತ್ತಿರುವ ಬಗ್ಗೆ ಆಕ್ಷೇಪಿಸಿ ಎದುರುದಾರರು ಆಪೇಕ್ಷಣ ಪತ್ರವನ್ನು ಸಲ್ಲಿಸಿರುತ್ತಾ ರೆ ಎಂದರೆ ನನಗೆ ನೆನಪಿಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ ದಿ 13.10.2020 ರಂದು ಎದುರುದಾರರು ವಿಚಾರಣೆ ಕಾಲಕ್ಕೆ ಆಪೇಕ್ಷಣ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಪೇಕ್ಷಣ ಪತ್ರವನ್ನು ಸ್ವೀಕರಿಸದೇ ಇದ್ದುದರಿಂದ ಎದುರುದಾರರು ಆಪೇಕ್ಷಣ ಪತ್ರವನ್ನು ಅಂಚೆ ಮೂಲಕ ನನಗೆ ಕಳುಹಿಸಿರುತ್ತಾರೆ ಎಂದರೆ ನನಗೆ ಈಗ ನೆನಪಿಲ್ಲ. ಎದುರುದಾರರು ಸಾಮಾನ್ಯ ಕಾರ್ಮಿಕನಾಗಿರುತ್ತಾನೆ ಎಂಬ ಸೂಚನೆಗೆ ಸಾಕ್ಷಿಯು ಆತ ಕಾರ್ಮಿಕ ಹಾಗೂ ಯೂನಿಯನ್ ನ ಅಧ್ಯಕ್ಷರಾಗಿರುತ್ತಾರೆ. ಸಾಕ್ಷಿಯು ಯುನಿಯನ್ ಅಧ್ಯಕ್ಷನಾಗಿದ್ದ ಬಗ್ಗೆ ನನಗೆ ಮಾಹಿತಿ ಇತ್ತು ಹೇಗೆ ಮಾಹಿತಿ ಬಂತು ಎಂದು ನನಗೆ ಹೇಳಲು ಆಗುವುದಿಲ್ಲ. ಎದುರುದಾರರು ಸಹೋದ್ಯೋಗಿಗೆ ಅನೋರೋಗ್ಯ ಇದ್ದುದರಿಂದ ಬೇರೆ ಸಹೋದ್ಯೋಗಿಯನ್ನು ನೇಮಿಸಿಕೊಳ್ಳಲು ಅವಕಾಶವನ್ನು ಕೋರಿದ್ದರೂ ಸಹ ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ . ಇದಕ್ಕೆ ಸಂಬಂಧಿಸಿದತಂೆ 06.11.2020 ಮತ್ತು 30.01.2021 ರಂದು ಎದುರುದಾರರು ನನಗೆ ಆಕ್ಷೇಪಣಾ ಪತ್ರಗಳನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಈ ಬಗ್ಗೆ ನಾನು ದಾಖಲಾತಿಗಳನ್ನು ನೋಡಿ ಹೇಳುವ ಅವಶ್ಯಕತೆ ಇರುವುದಿಲ್ಲ. ಎಂ ಡಬ್ಲ್ಯೂ-9 ಚೇತನ್ ನನಗೆ ನೆನಪಿರುತ್ತಾರೆ. ಸದರಿಯವರ ಸಾಕ್ಷ್ಯ ಕಾಲಕ್ಕೆ ಹಲವಾರು ದಾಖಲಾತಿಗಳನ್ನು ಗುರುತಿಸಲಾಗಿರುತ್ತದೆ ಎಂದರೆ ನನಗೆ ಈಗ ನೆನಪಿಲ್ಲ.

ಎಂ ಡಬ್ಲ್ಯೂ – 9 ರವರ ಸಾಕ್ಷ್ಯ ಕಾಲಕ್ಕೆ ಗುರುತಿಸಲಾದ ಎಂ –52 ರಿಂದ 54 ದಾಖಲಾತಿಗಳ ಪ್ರತಿಗಳನ್ನು ಎದುರುದಾರರಿಗೆ ನೀಡಲಾಗಿಲ್ಲ ಎಂದರೆ ಸರಿಯಲ್ಲ. ಆ ರೀತಿ ದಾಖಲಾತಿಗಳನ್ನು ಎದುರುದಾರರಿಗೆ ನೀಡಿದ್ದಲ್ಲಿ ಅದನ್ನು ಪಡೆದಂತಹ ಕಾಲಕ್ಕೆ ಅವರ ಸಹಿಯನ್ನು ದಿನಚರಿಯಲ್ಲಿ ನಾನು ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ . ಸದರಿ ದಾಖಲಾತಿಗಳು ಗೌಪ್ಯವಾದ ದಾಖಲಾತಿಗಳಾಗಿರುತ್ತವೆ ಎಂದು ಹೇಳಿ ಎದುರುದಾರರಿಗೆ ಅದನ್ನು ನೀಡಲು ನಿರಾಕರಿಸಿರುತ್ತೇನೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಎದುರುದಾರರಿಗೆ ಬೇಕಾದ ಸದರಿ ದಾಖಲಾತಿಗಳನ್ನು ಪರಿಶೀಲಿಸಬಹುದು ಎಂದು ಹೇಳಿರುತ್ತೇನೆ. ಸದರಿ ವಿಚಾರವನ್ನು ನನ್ನ ದಿನಚರಿಯಲ್ಲಿ ನಮೂದಿಸಿರುತ್ತೆನೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಅದೇ ರೀತಿ ಎಂ ಡಬ್ಲ್ಯೂ –10 ಕ್ರಿಸ್ಟೋಫರ್ ಅವರ ಸಾಕ್ಷ್ಯ ಕಾಲಕ್ಕೆ ಗುರುತಿಸಲಾದ ಎಂ–57 ರಿಂದ 74 ದಾಖಲಾತಿಗಳು ಗೌಪ್ಯ ದಾಖಲಾತಿಗಳಾಗಿರುತ್ತದೆ ಎಂದು ಎದುರುದಾರರಿಗೆ ನಾನು ನೀಡಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಸದರಿ ದಾಖಲಾತಿಗಳು ಎಕ್ಸ್ ಪೋರ್ಟ್ ಇನ್ವಾಪ್ ಗಳಾಗಿದ್ದರಿಂದ ಹಾಗೂ ಮಂಡನಾಧಿಕಾರಿಗಳು ಅವು ಗೌಪ್ಯ ದಾಖಲಾತಿಗಳಾಗಿರುತ್ತವೆ ಎಂದು ತಿಳಿಸಿದ್ದರಿಂದ ನೀಡಿರುವುದಿಲ್ಲ, ಆದರೆ ಎದುರುದಾರರಿಗೆ ಬೇಕಾದ ಸದರಿ ದಾಖಲಾತಿಗಳನ್ನು ಪರಿಶೀಲಿಸಬಹುದು ಎಂದು ಹೇಳಿರುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ಮಂಡನಾಂಧಿಕಾರಿಗಳು ಅಥವಾ ಸಾಕ್ಷಿದಾರರುಗಳು ನನಗೆ ಯಾವುದೇ ಲಿಖಿತ ಪತ್ರಗಳನ್ನು ನೀಡಿರುವುದಿಲ್ಲ ಎಂಬ ಸೂಚನೆಗೆ ಮಂಡನಾಧಿಕಾರಿಗಳು ಮೌಖಿಕವಾಗಿ ಹೇಳಿರುತ್ತಾರೆ ಅದನ್ನು ದಿನಚರಿಯಲ್ಲಿ ನಮೂದಿಸಿರುತ್ತೇನೆ. ಸದರಿ ದಾಖಲಾತಿಗಳ ಬಗ್ಗೆ ಮಂಡನಾಧಿಕಾರಿಗಳ ಹೇಳಿಕೆಗಳನ್ನು ಪರಿಶೀಲಿಸದೇ ಅವರು ಹೇಳಿದ ಮಾತನ್ನು ಒಪ್ಪಿಕೊಂಡು ಎದುರುದಾರರಿಗೆ ಸದರಿ ದಾಖಲಾತಿಗಳ ಪ್ರತಿಯನ್ನು ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾಖಲಾತಿಗಳನ್ನು ಪರಿಶೀಲಿಸಿ ಸದರಿ ದಾಖಲಾತಿಗಳು ಗೌಪ್ಯ ದಾಖಲಾತಿಗಳಾಗಿರುತ್ತದೆ ಎಂದು ತೀರ್ಮಾನಿಸಿರುತ್ತೇನೆ. ಈ ಬಗ್ಗೆ ನಾನು ಆದೇಶ ಮಾಡಿರುತ್ತೇನೆ. ಎದುರುದಾರರಿಗೆ ಸದರಿ ದಾಖಲಾತಿಗಳನ್ನು ಪ್ರತಿಯನ್ನು ನೀಡದೇ ಇದ್ದುದರಿಂದ ಎದುರುದಾರರಿಗೆ ಆ ದಾಖಲಾತಿಗಳ ಮೇಲೆ ಪಾಟೀ ಸವಾಲು ಮಾಡಲು ಆಗಿರುವುದಿಲ್ಲ ಎಂದರೆ ಸರಿಯಲ್ಲ .

ಸದರಿ ದಾಖಲಾತಿಗಳು ಅರ್ಜಿದಾರ ಸಂಸ್ಥೆಯ ಪ್ರತಿಸ್ಪರ್ಧಿಗಳ ಕೈಗೆ ಸಿಕ್ಕಿದ್ದಲ್ಲಿ ಅದರ ದುರುಪಯೋಗವಾಗುವ ಸಾಧ್ಯತೆ ಇದ್ದುದರಿಂದ ಅದನ್ನು ಎದುರುದಾರರಿಗೆ ಕೊಡಲಿಲ್ಲ. ಇದಕ್ಕೆ ಸಂಬಂಧಿಸಿದಂತೆ ಎದುರುದಾರರು ನನಗೆ ಆಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ ಎಂದರೆ ನನಗೆ ಈಗ ನೆನಪಿಲ್ಲ. ಎದುರುದಾರರು ತಮ್ಮ ಸಾಕ್ಷ್ಯ ಕಾಲಕ್ಕೆ ಸಲ್ಲಿಸಿದಂತಹ ದಾಖಲಾತಿಗಳನ್ನು ಗುರುತಿಸಲು ನಾನು ಹಲವಾರು ಬಾರಿ ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ . ಇದಕ್ಕೆ ಸಂಬಂಧಿಸಿದಂತೆ 05.07.2021 ಎದುರುದಾರರು ತಮ್ಮ ಆಕ್ಷೇಪಣಾ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ . ವಿಚಾರಣೆಯು ಮುಕ್ತಾಯವಾಗುವ ಸಮಯದಲ್ಲಿ ಮಂಡನಾಧಿಕಾರಿಗಳಿಗೆ 29 ದಾಖಲಾತಿಗಳನ್ನು ಗುರುತಿಸಲು ಅವಕಾಶವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ದಾಖಲಾತಿಗಳನ್ನು ಗುರುತಿಸಿದ ನಂತರ ಎದುರುದಾರರಿಗೆ ಪಾಟೀ ಸವಾಲನ್ನು ಮಾಡಲು ಯಾವುದೇ ಅವಕಾಶವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ದಾಖಲಾತಿಗಳ ಮೇಲೆ ಪಾಟೀ ಸವಾಲು ಮಾಡಲು ಅವಕಾಶ ಇರುತ್ತದೆ ಎಂದು ನಾನು ದಿನಚರಿಯಲ್ಲಿ ಬರೆದು ಎದುರುದಾರರಿಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ . 29 ದಾಖಲಾತಿಗಳನ್ನು ಗುರುತಿಸಲು ಮಂಡನಾಧಿಕಾರಿಗಳು ಅರ್ಜಿಯನ್ನು ಸಲ್ಲಿಸಿ ಅದಕ್ಕೆ ಸಂಬಂಧಿಸಿದಂತೆ ನಾನು ಆದೇಶ ಮಾಡಿದ ನಂತರ ದಾಖಲಾತಿಗಳನ್ನು ಗುರುತುವಿಕೆಗೆ ಒಳಪಡಿಸಲಾಗಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮಂಡನಾಧಿಕಾರಿಗಳು ಕೋರಿಕೆ ಪತ್ರದ ಜೊತೆಗೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಆ ಕಾಲಕ್ಕೆ ಎದುರುದಾರರ ಬಳಿ ಸದರಿ ದಾಖಲಾತಿಗಳನ್ನು ಗುರುತಿಸಲು ಆಕ್ಷೇಪಣೆ ಇದೆಯೇ ಎಂದು ಕೇಳಿರುತ್ತೇನೆ ಆಗ ಎದುರುದಾರರು ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ಸದರಿ ವಿಚಾರವನ್ನು ದಿನಚರಿಯಲ್ಲಿ ಬರೆದಿದ್ದೆನೋ ಇಲ್ಲವೋ ಎಂದು ಈಗ ನನಗೆ ನೆನಪಿಲ್ಲ . ಸದರಿ ವಿಚಾರವನ್ನು ನಾನು ದಾಖಲಾತಿಗಳನ್ನು ನೋಡಿ ಹೇಳುವ ಅವಶ್ಯಕತೆ ಇರುವುದಿಲ್ಲ. ಆ ರೀತಿ ನಾನು ದಿನಚರಿಯಲ್ಲಿ ಬರೆದಿರುವುದಿಲ್ಲ ಕೇವಲ ಮಂಡನಾಧಿಕಾರಿಗಳ ಮಾತನ್ನು ಕೇಳಿ ದಾಖಲಾತಿಗಳನ್ನು ಗುರುತುಸುವಿಕೆಗೆ ಒಳಪಡಿಸಿರುತ್ತೇನೆ ಎಂದರೆ ಸರಿಯಲ್ಲ . ನಾನು ಮಂಡನಾಧಿಕಾರಿಗಳೊಂದಿಗೆ ಶಾಮೀಲಾಗಿ ಎದುರುದಾರರಿಗೆ ಒಪ್ಪಿಗೆ ಇಲ್ಲದಿದ್ದರೂ ಸಹ ಕೆಲವೊಂದು ದಿನಚರಿಯಲ್ಲಿ ಒತ್ತಾಯ ಪೂರ್ವಕವಾಗಿ ಅವರ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ . ಈ ವಿಚಾರಕ್ಕೆ ಸಂಬಂಧಿಸಿದಂತೆ ದಿನಾಂಕ 02.08.2021 ರಂದು ಎದುರುದಾರರು ತಮ್ಮ ಆಕ್ಷೇಪಣ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಈಗ ನೆನಪಿಲ್ಲ. ಎಂ ಡಬ್ಲ್ಯೂ ನಂದಕುಮಾರ್ ರವರ ಹೆಸರು ನನಗೆ ಈಗ ನೆನಪಿಲ್ಲ.

ಸದರಿಯವರು ಹೆಚ್ಚುವರಿ ಪಾಟೀ ಸವಾಲನ್ನು ಮಾಡಲು ಅವಕಾಶವನ್ನು ಎದುರುದಾರರು ಕೇಳಿದ್ದರೂ ಸಹ ಅದನ್ನು ಪರಿಗಣಿಸದೇ ಸಾಕ್ಷಿಯನ್ನು ಬಿಡುಗಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ . 2021 ರಲ್ಲಿ ಎದುರುದಾರರಿಗೆ ಕೋವಿಡ್ ಸೋಂಕು ತಗುಲಿದ್ದು ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರು ಪಡಿಸಿದ್ದರೂ ಸಹ ನಾನು ವಿಚಾರಣೆಯನ್ನು ಮುಂದೂಡದೆ ಎದುರುದಾರರು ಹಾಜರಿರುವುದಿಲ್ಲ ಎಂದು ದಿನಚರಿಯಲ್ಲಿ ನಮೂದಿಸಿ ವಿಚಾರಣೆಯನ್ನು ನಡೆಸಿರುತ್ತೇನೆ ಎಂದರೆ ಸರಿಯಲ್ಲ. ಮಂಡನಾಧಿಕಾರಿಗಳು ಕೊಟ್ಟ ದಾಖಲಾತಿಗಳು ನಿಶಾನೆಯಾದ ನಂತರ ಅದೇ ದಾಖಲಾತಿಗಳನ್ನು ಬೇರೆ ಸಾಕ್ಷಿದಾರರಿಂದ ಮತ್ತೊಮ್ಮೆ ಗುರುತಿಸುವಿಕೆಗೆ ಒಳಪಡಿಸಲಾಗಿರುತ್ತದೆ ಎಂದರೆ ಸರಿಯಲ್ಲ . ನಾನು ವಿಚಾರಣೆಯನ್ನು ಪಕ್ಷಪಾತವಿಲ್ಲದೆ ನಡೆಸದೆ ಎದುರುದಾರರರಿಗೆ ಪೂರ್ವಗ್ರಹ ಪೀಡಿತವಾಗುವಂತೆ ವಿಚಾರಣೆಯನ್ನು ನಡೆಸುವ ಬದಲಾಗಿ ಆಡಳಿತ ವರ್ಗದವರೊಂದಿಗೆ ಶಾಮೀಲಾಗಿ ವಿಚಾರಣೆಯನ್ನು ಅನ್ಯಾಯವಾಗಿ ನಡೆಸಿರುತ್ತೀರಿ ಎಂದರೆ ಸರಿಯಲ್ಲ.

ಈ ರೀತಿ ಅನ್ಯಾಯವಾಗಿ ನಡೆಸಿರುವಂತ  ವಿಚಾರಣೆಗೆ ಅನುಗುಣವಾಗಿ ನಾನು ವಿಚಾರಣಾ ವರದಿಯನ್ನು ನೀಡಿರುತ್ತೇನೆ ಎಂಬ ಸೂಚನೆಗೆ ಸತ್ಯಾಂಶದ ಬಗ್ಗೆ ವರದಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರರ ಮೇಲೆ ಇದ್ದಂತಹ ಪ್ರತಿಯೊಂದು ದೋಷಾರೋಪಣೆಯ ವಿಚಾರಣಾ ನಿರ್ಣಯವನ್ನು ವರದಿಯಲ್ಲಿ ನಮೂದಿಸಿರುತ್ತೇನೆ . ಆ ರೀತಿ ನಾನು ಪ್ರತ್ಯೇಕ ವಿಚಾರಣಾ ನಿರ್ಣಯವನ್ನು ವರದಿಯಲ್ಲಿ  ನಮೂದಿಸದೇ ಆಡಳಿತ ವರ್ಗಕ್ಕೆ ಸಹಾಯವಾಗುವಂತೆ ವಿಚಾರಣಾ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷ್ಯವನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.